## ಕರ್ನಾಟಕ ಸರ್ಕಾರ

ಸಂಖ್ಯೆ: MWD 70 MDS 2011

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05-11-2011.

## ಅಧಿಸೂಚನೆ

2011-12ನೇ ಸಾಲಿನಲ್ಲಿ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಕ್ರಿಶ್ಚಿಯನ್ ಅಭಿವೃದ್ಧಿ ಪರಿಷತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿದೆ.

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಹುದ್ದೆ |
|---|---|---|
| 1 | ಮಾನ್ಯ ಮುಖ್ಯಮಂತ್ರಿಗಳು | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಯೋಜನಾ ಇಲಾಖೆ | ಸದಸ್ಯರು |
| 3 | ಸರ್ಕಾರದ ಕಾರ್ಯದರ್ಶಿಗಳು<br>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | ಸದಸ್ಯರು |
| 4 | ಸರ್ಕಾರದ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ (ವೆಚ್ಚ) | ಸದಸ್ಯರು |
| 5 | ಶ್ರೀ. ಕೆನಡಿ ಶಾಂತಕುಮಾರ್,<br>ನಂ. 525, 33ನೇ ಅಡ್ಡರಸ್ತೆ, 10ನೇ ಮುಖ್ಯಸ್ತೆ,<br>4ನೇ ಹಂತ ಜಯನಗರ, ಬೆಂಗಳೂರು. | ಸದಸ್ಯರು |
| 6 | ಶ್ರೀ. ಫ್ರಾಂಕ್ಲಿನ್ ಮಾಂಥೆರೋ,<br>ಜಿಲ್ಲಾ ಬಿ.ಜೆ.ಪಿ. ಕಛೇರಿ, ಜಗನ್ನಾಥರಾವ್ ಜೋಶಿ ಸೌಧ, ಕೋಡಿಯಾಲ ಬೈಲು, ಮಂಗಳೂರು-3 | ಸದಸ್ಯರು |
| 7 | ಶ್ರೀ. ಜಾನ್ ಡಿಸೋಜಾ,<br>ಟೌನ್ ಚರ್ಚ್ ಹತ್ತಿರ, ವಿಟ್ಲ, ಬಂಟ್ವಾಳ ತಾಲ್ಲೂಕು,<br>ದಕ್ಷಿಣ ಕನ್ನಡ ಜಿಲ್ಲೆ | ಸದಸ್ಯರು |
| 8 | ಶ್ರೀ. ರಾಜು ಜೋಸೇಫ್,<br>ಡಾ. ಮೇರಿ ಬಾಂತಿಕಟ್ಟ, 1ನೇ ಅಡ್ಡರಸ್ತೆ,<br>ಉರ್ದು ಪ್ರಾಥಮಿಕ ಶಲೆ ಹತ್ತಿರ, ಹಳೇ ಹುಬ್ಬಳ್ಳಿ,<br>ಹುಬ್ಬಳ್ಳಿ | ಸದಸ್ಯರು |
| 9 | ಶ್ರೀ. ವಿನ್ಸಂಟ್ ರೋಡ್ರಿಗಸ್ ಬಿನ್<br>ಜೋಸೆಫ್ ರೋಡ್ರೀಗಸ್<br>ಎಫ್.ಸಿ.ಐ. ಗೋಡೌನ್ ಹತ್ತಿರ, ಸಾಗರ ರಸ್ತೆ,<br>ಆಲಕೋಳ, ವಿನೋಭ ನಗರ ಅಂಚೆ,<br>ಶಿವಮೊಗ್ಗ -577 204 | ಸದಸ್ಯರು |

| | | |
|---|---|---|
| 10 | ಶ್ರೀಮತಿ ಸುಮನಾ ಗೋಮೆಸ್ ಕೋಂ ರಾಬರ್ಟ್ ಗೋಮೆಸ್, 1ನೇ ಅಡ್ಡರಸ್ತೆ, ನೆಹರು ನಗರ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ | ಸದಸ್ಯರು |
| 11 | ಶ್ರೀ. ಎಂ.ಪಿ. ಸನ್ನಿ S/o ಎಂ.ಐ. ಪೆನ್‌ಲೋಸ್ ಸುಂಕದಕಟ್ಟೆ, ಎನ್.ಆರ್.ಪುರ ತಾಲ್ಲೂಕು ಮತ್ತು ಅಂಚೆ ಚಿಕ್ಕಮಗಳೂರು ಜಿಲ್ಲೆ | ಸದಸ್ಯರು |
| 12 | ಶ್ರೀಮತಿ ಗ್ಲಾಡಿಯಸ್ ಅಲ್ಮೇಡ W/o ವಿಂಸೆಂಟ್ ಅಲ್ಮೇಡ ಶಿರ್ವ ಗ್ರಾಮ ಮತ್ತು ಅಂಚೆ ಉಡುಪಿ ಜಿಲ್ಲೆ. | ಸದಸ್ಯರು |
| 13 | ಉಪ ಕಾರ್ಯದರ್ಶಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | ಸದಸ್ಯರು ಹಾಗೂ ಕನ್ವೀನರ್ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಅಬ್ಬಾಸ್ ಷರೀಫ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು, ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ, 200 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ನಂ. 215, ವಿಕಾಸ ಸೌಧ, ಬೆಂಗಳೂರು ಇವರಿಗೆ ಕಳುಹಿಸುವಂತೆ ಕೋರಲಾಗಿದೆ.

ಇವರಿಗೆ:

1) ಅಪರ ಮುಖ್ಯಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು
2) ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
3) ಸರ್ಕಾರಧ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು
4) ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
5) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ), ಬೆಂಗಳೂರು
6) ಸರ್ಕಾರದ ಉಪ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
7) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
8) ಮುಖ್ಯಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
9) ಸಂಬಂಧಪಟ್ಟ ಸದಸ್ಯರುಗಳು,
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗಾಗಿ 2011-12ನೇ ಸಾಲಿನಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರೂ.50.00ಕೋಟಿಗಳಿಗೆ ಅನುಮೋದನೆ ನೀಡುವ ಬಗ್ಗೆ:-

ಓದಲಾಗಿದೆ: 1) ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿ: 18-04-2011ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು.

--

### ಪ್ರಸ್ತಾವನೆ

ರಾಜ್ಯದಲ್ಲಿನ ಕ್ರಿಶ್ಚಿಯನ್ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ 2011-12ನೇ ಸಾಲಿನಲ್ಲಿ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲು ರೂ.50.00ಕೋಟಿ ಅನುದಾನವನ್ನು ಒದಗಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಯವರು 2011-12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದ್ದರು. ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:18/04/2011ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ರಾಜ್ಯದಲ್ಲಿರುವ ಕ್ರಿಶ್ಚಿಯನ್ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಮ್ಮಿಕೊಳ್ಳುವ ಕುರಿತು ಕೂಲಂಕಷವಾಗಿ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಗಿರುತ್ತದೆ.

ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಗಾಗಿ ಸಮುದಾಯ ಭವನಗಳ ನಿರ್ಮಾಣ, ವೃತ್ತಿಪರ ವಿದ್ಯಾಭ್ಯಾಸಕ್ಕಾಗಿ ರೂ.5000ಗಳಿಂದ ಗರಿಷ್ಟ ರೂ.50.000ಗಳವರೆಗೆ ಸಾಲ ಸೌಲಭ್ಯಗಳನ್ನು ಶೇಕಡಾ ರೂ.2%ರ ಬಡ್ಡಿ ದರದಲ್ಲಿ ನೀಡಲು,ಗ್ರಾಮೀಣ ಕುಶಲ ಕರ್ಮಿಗಳು,ವೃತ್ತಿ ಕುಲಕಸುಬುದಾರರ ಕುಶಲತೆ ಮತ್ತು ತಂತ್ರಜ್ಞಾನ ಉತ್ತಮ ಪಡಿಸಲು ತರಬೇತಿ, ಸ್ವಂತ ಉದ್ಯಮಿಯಾಗಲು ಶೇಕಡಾ 4%ರ ಬಡ್ಡಿದರದಲ್ಲಿ ಸಾಲ. ನಗರಪ್ರದೇಶ, ಗ್ರಾಮಗಳಲ್ಲಿ ವಾಸಿಸುವ ಅನಕ್ಷರಸ್ಥ ಕ್ರಿಶ್ಚಿಯನ್ ಮಹಿಳೆಯರಿಗೆ ತಳ್ಳುವ ಗಾಡಿಯಲ್ಲಿ, ತರಕಾರಿ ಹಣ್ಣು ಮಾರಾಟ, ಹಾಸಿಗೆ ತಯಾರಿಕೆ ಇತ್ಯಾದಿ ಕೆಲಸಗಳಿಗಾಗಿ ಶೇಕಡ 5% ಬಡ್ಡಿ ದರದಲ್ಲಿ ರೂ.10.000 ಸಾಲ.(75% ಸಾಲ ಹಾಗೂ 25%ಸಬ್ಸಿಡಿ)ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ನಿರುದ್ಯೋಗ ನಿವಾರಣೆ ಮತ್ತು ಆರ್ಥಿಕ ಸ್ವಾವಲಂಬನೆಗಾಗಿ ನರ್ಸಿಂಗ್, ಕಂಪ್ಯೂಟರ್ ತರಬೇತಿ CIPET ಮೈಸೂರು ಇವರಿಂದ ವಿವಿಧ ತರಬೇತಿ,ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಇವರಿಂದ ಬ್ಯಾಂಕಿಂಗ್,ಫೈನಾನ್ಸಿಯಲ್ ಸರ್ವಿಸ್ ಮುಂತಾದ ತರಬೇತಿ. ಕ್ರಿಶ್ಚಿಯನ್ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಚರ್ಚುಗಳ ದುರಸ್ಥಿ ಮತ್ತು ನವೀಕರಣಕ್ಕಾಗಿ ಅನುದಾನ, ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಅನುದಾನ, ಮನೆ ಕಟ್ಟಲು ಸಾಲ ಹಾಗೂ ಬಡ್ಡಿಯಲ್ಲಿ ರಿಯಾಯಿತಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರಸ್ತಾಪಿಸಲಾಗಿದೆ.

ಅಲ್ಲದೆ, ಚರ್ಚುಗಳ ದುರಸ್ಥಿ ಮತ್ತು ನವೀಕರಣ ಕಾಮಾಗಾರಿಗಾಗಿ ಅನುದಾನವನ್ನು ಒದಗಿಸುವ ಬಗೆಗಿನ ಕಾರ್ಯಕ್ರಮದ ಮೇಲುಸ್ತುವಾರಿ ಸಲುವಾಗಿ ಒಂದು ಕ್ರಿಶ್ಚಿಯನ್ ಅಭಿವೃದ್ಧಿ ಪರಿಷತ್ತನ್ನು ರಚಿಸಲು ಪ್ರಸ್ತಾಪಿಸಲಾಗಿದೆ.

ಈ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಆಸಂಕಇ 70 ಎಂಡಿಎಸ್ 2011, ಬೆಂಗಳೂರು, ದಿನಾಂಕ: 19/09/2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಕ್ರಿಶ್ಚಿಯನ್ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ, ಸಮುದಾಯ ಭವನಗಳ ನಿರ್ಮಾಣ, ಚರ್ಚುಗಳ ದುರಸ್ಥಿ ಮತ್ತು ನವೀಕರಣ ಮುಂತಾದ ಈ ಯೋಜನೆಗಳನ್ನು (ಅನುಬಂಧ-1ರಲ್ಲಿ ನಮೂದಿಸಿರುವ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ

---2

ಅಭಿವೃದ್ಧಿ ನಿಗಮ ನಿಯಮಿತಗಳ ಮೂಲಕ 2011-12 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆಯವ್ಯಯ ಲೆಕ್ಕಶೀರ್ಷಿಕೆ "2225-03-800-0-24-059"ರಡಿ ರೂ.50.00ಕೋಟಿಗಳನ್ನು ಒದಗಿಸಲಾಗಿದೆ. ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತು ಮತ್ತು ನಿಬಂದನೆಗಳಿಗೆ ಒಳಪಡಿಸಿ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಅ) ಸಮುದಾಯ ಭವನಗಳನ್ನು ನಿರ್ಮಿಸಲು ರೂ.10.00ಕೋಟಿ ಮತ್ತು ಚರ್ಚುಗಳ ದುರಸ್ತಿ ಮತ್ತು ನವೀಕರಣಕ್ಕಾಗಿ ರೂ.05.00ಕೋಟಿಗಳನ್ನು ಭರಿಸುವುದು. ಈ ಎರಡು ಉದ್ದೇಶಗಳಿಗಾಗಿ ನೀಡುವ ಸಹಾಯ ಧನವು ಪ್ರತಿ ಪ್ರಕರಣದಲ್ಲಿ ರೂ.10.00ಲಕ್ಷವನ್ನು ಮೀರಬಾರದು. ಹೆಚ್ಚಿನ ಖರ್ಚು ಭರಿಸಬೇಕಾದಲ್ಲಿ ಸ್ಥಳೀಯ ಕ್ರಿಶ್ಚಿಯನ್ ಸಮುದಾಯದಲ್ಲಿ ಸಂಗ್ರಹಿಸಿ ಭರಿಸಬೇಕು.

ಆ) ಕ್ರಿಶ್ಚಿಯನ್ ಸಮುದಾಯದವರು ನಡೆಸುತ್ತಿರುವ ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳ ಮೂಲ ಸೌಕರ್ಯಗಳಿಗೆ ಅನುದಾನ ನೀಡಲು ರೂ.5.00ಕೋಟಿ ಭರಿಸುವುದು. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇವರು ಮರ್ಗಸೂಚಿಗಳನ್ನು ತಯಾರಿಸಿ, ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.

ಇ) ಕ್ರಿಶ್ಚಿಯನ್ ಸಮುದಾಯದವರು ಮನೆ ಕಟ್ಟಲು ಗರಿಷ್ಟ ರೂ.5.00ಲಕ್ಷ ಮತ್ತು ಅದಕ್ಕಿಂತ ಕಡಿಮೆ ಪಡೆದ ಸಾಲಕ್ಕೆ ರೂ.1.00ಲಕ್ಷಕ್ಕೆ ಮೀರದಂತೆ ಬಡ್ಡಿಯಲ್ಲಿ ರಿಯಾಯತಿ ನೀಡುವುದು, ಈ ಉದ್ದೇಶಕ್ಕಾಗಿ ರೂ.5.00ಕೋಟಿಗಳನ್ನು ಭರಿಸುವುದು. ಈ ಕುರಿತು ಸೂಕ್ತ ಮಾರ್ಗಸೂಚಿಗಳನ್ನು ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇವರು ತಯಾರಿಸಿ ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.

ಈ) ಕೌಶಲ್ಯ ಅಭಿವೃದ್ಧಿ ತರಬೇತಿಗಾಗಿ ರೂ.5.00ಕೋಟಿ ಭರಿಸುವುದು. ಪ್ರತಿ ಅಭ್ಯರ್ಥಿಗೆ ತರಬೇತಿಯ ಪೂರ್ಣಾವಧಿಗೆ ರೂ.25.000ಕ್ಕೆ ಮಿತಿಗೊಳಿಸಬೇಕು.

ಉ) ಅನುಬಂಧ-1 ರಲ್ಲಿ ಪ್ರಸ್ತಾಪಿಸಿರುವ ಅರಿವು, ಶ್ರಮಶಕ್ತಿ, ಮತ್ತು ಸಣ್ಣ ಪ್ರಮಾಣದ ಸಾಲ ಯೋಜನೆಗಳನ್ನು ಸಂಬಂಧಿತ ಮಾರ್ಗ ಸೂಚಿಗಳ ಪ್ರಕಾರ ಯೋಜನೆಯನ್ನು ಅನುಷ್ಟಾನಗೊಳಿಸಲು ಹಣವನ್ನು ಬಿಡುಗಡೆ ಮಾಡತಕ್ಕದ್ದು,

ಋ) ಕ್ರಿಶ್ಚಿಯನ್ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು(ಅನುಬಂಧ-1ರ ಕ್ರಮಸಂಖ್ಯೆ-6) ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇವರು ನೀಡತಕ್ಕದ್ದು..

ಈ ಆದೇಶದ ಅನುಬಂಧ-1ರಲ್ಲಿನ ಯೋಜನೆಗಳನ್ನು ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಅನುಷ್ಠಾನಗೊಳಿಸಲು ಈ ಆದೇಶದ ಅನುಬಂಧ-2ರಲ್ಲಿರುವಂತೆ ಸಮಿತಿಯನ್ನು ರಚಿಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 7 ಐಎಂಎಂ 2011, ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 307 Exp.3/11, ಸಹಮತಿ ಹಾಗೂ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ: 437/2011, ದಿ: 7-9-02011ರ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಅಬ್ಬಾಸ್ ಷರೀಫ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು, ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, 200 ಪ್ರತಿಗಳನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,ಕೊಠಡಿ ಸಂ.215, ವಿಕಾಸ ಸೌಧ, ಬೆಂಗಳೂರು, ಇವರಿಗೆ ಕಳುಹಿಸುವಂತೆ ಕೋರಲಾಗಿದೆ.

<u>ಇವರಿಗೆ</u>

1. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯವರ ಆಪ್ತ ಸಹಾಯಕರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.(ಸಚಿವ ಸಂಪುಟ ವ್ಯವಹಾರಗಳು)
3. ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿ.
4. ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ.
7. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು.
10. ಸಂಬಂಧಪಟ್ಟ ಸದಸ್ಯರುಗಳು.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಅನುಬಂಧ-1

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳು | ಅನುಷ್ಠಾನಗೊಳಿಸುವ ಇಲಾಖೆ/ಸಂಸ್ಥೆ | ಯೋಜನೆಯ ಸ್ವರೂಪ | ಮೊತ್ತ |
|---|---|---|---|---|
| 01 | ಕ್ರಿಶ್ಚಿಯನ್ ಸಮುದಾಯಕ್ಕೆ ಪ್ರತ್ಯೇಕವಾಗಿ ಸಮುದಾಯ ಭವನಗಳ ನಿರ್ಮಾಣ | ಅಲ್ಪಸಂಖ್ಯಾತರ ನಿರ್ದೇಶನಾಲಯ | ಅನುದಾನ | 1000.00 |
| 02 | ಅರಿವು- ಈ ಯೋಜನೆಯಡಿಯಲ್ಲಿ ವೃತ್ತಿಪರ ವಿದ್ಯಾಭ್ಯಾಸಕ್ಕಾಗಿ ಅಂದರೆ, ಎಂ.ಬಿ.ಬಿ.ಎಸ್, ಇಂಜಿನಿಯರಿಂಗ್, ಬಿಡಿಎಸ್, ಬಿಇ. ಎಂಸಿಎ, ಬಿಎಡ್, ನರ್ಸಿಂಗ್ ಇತ್ಯಾದಿ., ವಾರ್ಷಿಕವಾಗಿ ಕನಿಷ್ಠ ರೂ.5,000/-ಗಳು ಗರಿಷ್ಠ ರೂ 50,000/-ಗಳಂತೆ ಸಾಲ ಸೌಲಭ್ಯವನ್ನು ಶೇ.2ರ ಬಡ್ಡಿದರದಲ್ಲಿ ಕಲ್ಪಿಸುವುದು. | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ | ಸಾಲ | 500.00 |
| 03 | ಶ್ರಮಶಕ್ತಿ- ಈ ಯೋಜನೆಯಡಿಯಲ್ಲಿ ಕ್ರಿಶ್ಚಿಯನ್ ಸಮುದಾಯ ಗ್ರಾಮೀಣ ಕುಶಲಕರ್ಮಿಗಳ ಹಾಗೂ ವೃತ್ತಿ ಕುಲಕಸುಬುದಾರರ ಕುಶಲತೆ ಮತ್ತು ತಂತ್ರಜ್ಞಾನವನ್ನು ಉತ್ತಮಪಡಿಸಿಕೊಳ್ಳಲು ತರಬೇತಿಯನ್ನು ಹಾಗೂ ಸ್ವಂತ ಉದ್ದಿಮೆಯನ್ನು ಕೈಗೊಳ್ಳಲು ರೂ.25,000/-ಗಳನ್ನು ಶೇ.4ರ ಬಡ್ಡಿಯ ದರದಲ್ಲಿ ಒದಗಿಸಲಾಗುವುದು. | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ | ಸಾಲ | 500.00 |
| 04 | ಸಣ್ಣ ಸಾಲದ ಯೋಜನೆ- ಈ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಮತ್ತು ಗ್ರಾಮಗಳಲ್ಲಿ ವಾಸಿಸುವ ಕ್ರಿಶ್ಚಿಯನ್ ಸಮುದಾಯದ ಮಹಿಳೆಯರು ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದು, ಅಂತಹವರಿಗೆ ತಳ್ಳು ಗಾಡಿಯಲ್ಲಿ ತರಕಾರಿ, ಸಣ್ಣ ವ್ಯಾಪಾರ, ಹಾಸಿಗೆ [illegible] ಇತ್ಯಾದಿ ಶೇ.3% ಬಡ್ಡಿ ದರದಲ್ಲಿ ರೂ.10,000/- ನೀಡುವುದು. (75% ಸಾಲ ಹಾಗೂ 25% ಸಬ್ಸಿಡಿ) | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ | ಸಾಲ (75%) ಸಬ್ಸಿಡಿ(25%) | 500.00 |
| 05 | ಕ್ರಿಶ್ಚಿಯನ್ ಸಮುದಾಯದ ಅಭ್ಯರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ನಿರುದ್ಯೋಗ ನಿವಾರಣೆ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಸಫಲಗೊಳಿಸುವ ಉದ್ದೇಶದಿಂದ ನರ್ಸಿಂಗ್, ಕಂಪ್ಯೂಟರ್ ತರಬೇತಿ, Central Institute of Plastic Engineering Technology Mysore, ರವರಿಂದ ವಿವಿಧ ತರಬೇತಿ ನೀಡಲಾಗುವುದು, ಹಾಗೂ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತರವರಿಂದ Post Graduate Diploma in Banking & Financial Service, Infrastructure Management Services ಮತ್ತು ಇತರ ತರಬೇತಿಗಳನ್ನು ನೀಡಲಾಗುವುದು. | ಅಲ್ಪಸಂಖ್ಯಾತರ ನಿರ್ದೇಶನಾಲಯ | ಅನುದಾನ | 500.00 |
| 06 | ಕ್ರಿಶ್ಚಿಯನ್ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿವೇತನ | ಅಲ್ಪಸಂಖ್ಯಾತರ ನಿರ್ದೇಶನಾಲಯ | ಅನುದಾನ | 500.00 |
| | ಒಟ್ಟು | | | 3500.00 |

ರೂ. ಲಕ್ಷಗಳಲ್ಲಿ

| ಕ್ರ. ಸಂ. | ಹೊಸ ಯೋಜನೆಗಳು | ಮೊತ್ತ |
|---|---|---|
| 01 | ಚರ್ಚುಗಳ ದುರಸ್ತಿ ಮತ್ತು ನವೀಕರಣಗೊಳಿಸುವುದಕ್ಕೆ ಅನುದಾನ.<br>(ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಇವರು ಮಾರ್ಗಸೂಚಿಗಳನ್ನು ತಯಾರಿಸಿ, ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.) | 500-00 |
| 02 | ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳ ಮೂಲ ಸೌಕರ್ಯಗಳಿಗೆ ಅನುದಾನ.<br>(ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಇವರು ಮಾರ್ಗಸೂಚಿಗಳನ್ನು ತಯಾರಿಸಿ, ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.) | 500-00 |
| 03 | ಕ್ರಿಶ್ಚಿಯನ್ ಸಮುದಾಯದವರು ಮನೆ ಕಟ್ಟಲು ಗರಿಷ್ಠ ರೂ.5.00 ಲಕ್ಷ ಮತ್ತು ಅದಕ್ಕಿಂತ ಕಡಿಮೆ ಇರುವ ಸಾಲಕ್ಕೆ ರೂ.1.00 ಲಕ್ಷಕ್ಕೆ ಮೀರದಂತೆ ಬಡ್ಡಿಯಲ್ಲಿ ರಿಯಾಯಿತಿ.<br>(ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಇವರು ಮಾರ್ಗಸೂಚಿಗಳನ್ನು ತಯಾರಿಸಿ, ಸರ್ಕಾರದ ಅನುಮೋದನೆ ಪಡೆಯತಕ್ಕದ್ದು.) | 500.00<br>(14) |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಅಬ್ಬಾಸ್ ಷರೀಫ್) 20/9/14
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅನುಬಂಧ-2

**ಸಮಿತಿ**

| ಕ್ರ. ಸಂ. | ವಿವರ | ಹುದ್ದೆ |
|---|---|---|
| 01 | ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. | ಅಧ್ಯಕ್ಷರು |
| 02 | ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ | ಸದಸ್ಯರು |
| 03 | ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | ಸದಸ್ಯರು |
| 04 | ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ) | ಸದಸ್ಯರು |
| 05 | ವಿವಿಧ ಕ್ರಿಶ್ಚಿಯನ್ ಸಮುದಾಯಗಳಿಂದ ನಾಮನಿರ್ದೇಶನ ಮಾಡಿದ ಪ್ರತಿನಿಧಿಗಳು (13ಕ್ಕಿಂತ ಮೀರದಂತೆ) | ಸದಸ್ಯರು |
| 06 | ಉಪ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ | ಸದಸ್ಯರು ಹಾಗೂ ಕನ್ವೀನರ್ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಅಬ್ಬಾಸ್ ಷರೀಫ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

5

# ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ: ಕ್ರಿಶ್ಚಿಯನ್ ಸಮುದಾಯದವರಿಗೆ ಮನೆ ನಿರ್ಮಾಣ ಮಾಡಲು ಸಹಾಯಾನುದಾನ ನೀಡುವ ಕುರಿತು

ಓದಲಾಗಿದೆ:

1) ದಿನಾಂಕ: 18.04.2011ರಂದು ಅಪರ ಮುಖ್ಯಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಗಳು
2) ಸರ್ಕಾರಿ ಆದೇಶ ಸಂಖ್ಯೆ: ಅಸಂಕಇ 70 ಎಂಡಿಎಸ್ 2011 , ದಿನಾಂಕ: 19-09-2011
3) ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಪ್ರಸ್ತಾವನೆ ಸಂಖ್ಯೆ: ಅಸಂನಿ/ಚರ್ಚ್/ಸಿಆರ್-27/2011-12

ಪ್ರಸ್ತಾವನೆ:

ಕರ್ನಾಟಕ ರಾಜ್ಯದಲ್ಲಿ ಶಾಶ್ವತವಾಗಿ ನೆಲೆಸಿರುವ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿರುವ ನಿವಾಸಿಗಳಿಗೆ ಮನೆ ನಿರ್ಮಾಣಕ್ಕಾಗಿ ಪ್ರತ್ಯೇಕ ಸಹಾಯಾನುದಾನ ನಿಯಮಗಳನ್ನು ರಚಿಸುವುದು ಅಗತ್ಯ ಮತ್ತು ಅಪೇಕ್ಷಣೀಯವಾಗಿದೆ ಎಂದು ಕಂಡುಬಂದಿದೆ. ಮೇಲೆ ಉಲ್ಲೇಖಿಸಿದ ಸರ್ಕಾರಿ ಆದೇಶದಂತೆ, ನಂತರ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜೊತೆ ಸಮಾಲೋಚಿಸಿದ ತರುವಾಯ ಈ ಸಂಬಂಧದಲ್ಲಿ ಸಹಾಯಾನುದಾನ ನಿಯಮಗಳನ್ನು ಅಂತಿಮಗೊಳಿಸಲಾಗಿದೆ.

## ಸರ್ಕಾರಿ ಆಧೇಶ ಸಂಖ್ಯೆ: ಎಂಡಬ್ಲ್ಯೂಡಿ 49 ಎಂಡಿಎಸ್ 2012, ಬೆಂಗಳೂರು ದಿನಾಂಕ: 16-01-2012

1. ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿ ವಿವರಿಸಿರುವಂತೆ ಕರ್ನಾಟಕ ರಾಜ್ಯದ ಕ್ರಿಶ್ಚಿಯನ್ ಸಮುದಾಯದವರಿಗೆ ಮನೆ ನಿರ್ಮಾಣ ಮಾಡಲು ಸಹಾಯಾನುದಾನವನ್ನು ನೀಡುವ ನಿಯಮಗಳನ್ನೊಳಗೊಂಡ ಮಾರ್ಗಸೂಚಿಗೆ ಕರ್ನಾಟಕ ಸರ್ಕಾರ ಅನುಮೋದನೆ ನೀಡಿದೆ.

2. ಈ ಸಹಾಯಾನುದಾನ ನಿಯಮಗಳು ಕೂಡಲೇ ಜಾರಿಗೆ ಬರತಕ್ಕದ್ದು.

3. ಈ ಯೋಜನೆಯನ್ನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಜಾರಿಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಅಬ್ಬಾಸ್ ಷರೀಫ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ಈ ಆದೇಶವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು
3. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
6. ಎಲ್ಲಾ ಜಿಲ್ಲೆಗಳ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು
7. ಕಾರ್ಯದರ್ಶಿ, ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು
8. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ (3 ಮತ್ತು 9)
9. ಅಧೀನ ಕಾರ್ಯದರ್ಶಿ, ಯೋಜನಾ ಇಲಾಖೆ, ಪಿಪಿ-2
10. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿಗಳು
11. ಸರ್ಕಾರದ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
12. ಶಿವಮೊಗ್ಗ, ಕೋಲಾರ, ಗುಲ್ಬರ್ಗಾ, ಚಿಕ್ಕಮಗಳೂರು, ಬಿಜಾಪುರ ಜಿಲ್ಲೆಗಳ ಅಲ್ಪಸಂಖ್ಯಾತರ ಜಿಲ್ಲಾಧಿಕಾರಿಗಳು,
13. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು.

# ಅನುಬಂಧ

ಕರ್ನಾಟಕದಲ್ಲಿ ವಾಸಿಸುತ್ತಿರುವ ಕ್ರಿಶ್ಚಿಯನ್ ಸಮುದಾಯದವರಿಗೆ ಮನೆ ನಿರ್ಮಾಣ ಮಾಡಲು ಸಹಾಯಾನುದಾನ ನೀಡುವ ಕುರಿತ ಯೋಜನೆಯ ಮಾರ್ಗಸೂಚಿಗಳು.

**ಯೋಜನೆ:**

ಕ್ರಿಶ್ಚಿಯನ್ ಸಮುದಾಯದವರಿಗೆ ಮನೆ ನಿರ್ಮಾಣ ಮಾಡಲು ಗೃಹ ಸಾಲದ ಮೇಲಿನ ಗರಿಷ್ಠ ಒಂದು ಲಕ್ಷ ರೂಗಳ ಬಡ್ಡಿ ರಿಯಾಯಿತಿ ಸಹಾಯಧನದ ಯೋಜನೆ.

**ಉದ್ದೇಶ:**

ರಾಜ್ಯದಲ್ಲಿನ ಕ್ರಿಶ್ಚಿಯನ್ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ 2011-12ನೇ ಸಾಲಿನಲ್ಲಿ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವಂತೆ ರಾಜ್ಯದ ಕ್ರಿಶ್ಚಿಯನ್ ಸಮುದಾಯದವರ ಜನರು ಮನೆ ನಿರ್ಮಾಣ ಮಾಡಲು ಪಡೆಯುವ ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಇತರೆ ಅಂಗೀಕೃತ ಹಣಕಾಸು ಸಂಸ್ಥೆಗಳಿಂದ ಗರಿಷ್ಠ ಐದು ಲಕ್ಷ ರೂಪಾಯಿಗಳ ಮತ್ತು ಅದಕ್ಕಿಂತ ಕಡಿಮೆ ಪಡೆದ ಗೃಹ ಸಾಲಕ್ಕೆ ಗರಿಷ್ಠ ಒಂದು ಲಕ್ಷ ರೂಪಾಯಿಗಳಿಗೆ ಮೀರದಂತೆ ಗೃಹ ಸಾಲದ ಮೇಲಿನ ಬಡ್ಡಿಯಲ್ಲಿ ರಿಯಾಯಿತಿ ನೀಡಲು ಉದ್ದೇಶಿಸಲಾಗಿದೆ.

**ಅನುಷ್ಠಾನ:**

KSFC

ಈ ಯೋಜನೆಯು 1-4-2011ರಿಂದ ಜಾರಿಗೊಳಿಸಲಾಗಿದ್ದು ಈಗಾಗಲೇ 1-4-2007ರಿಂದ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಅಂಗೀಕೃತ ಹಣಕಾಸು ಸಂಸ್ಥೆಗಳಿಂದ ಗರಿಷ್ಠ ಐದು ಲಕ್ಷ ರೂಪಾಯಿಗಳವರೆಗೆ ಗೃಹ ಸಾಲ ಪಡೆದಿರುವ ಎಲ್ಲಾ ಅರ್ಹ ಕ್ರಿಶ್ಚಿಯನ್ ಸಮುದಾಯದ ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆಯಬಹುದು. ಮೊದಲು ಬಂದ ಅರ್ಹ ಫಲಾನುಭವಿಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯೊಳಗೆ ಸೌಲಭ್ಯ ಒದಗಿಸಲಾಗುವುದು.

**ಯೋಜನೆಯ ಪ್ರಯೋಜನ:**

ಈ ಯೋಜನೆಯಡಿಯಲ್ಲಿ ಕನಿಷ್ಠ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರುವ ಕ್ರಿಶ್ಚಿಯನ್ ಸಮುದಾಯದವರು ಸದರಿ ಯೋಜನೆಯ ಸೌಲಭ್ಯವನ್ನು ಪಡೆಯಬಹುದು. ಕಳೆದ ಐದು ವರ್ಷಗಳಿಂದ ಈವರೆಗೆ ಐದು ಲಕ್ಷ ರೂಪಾಯಿಗಳ ಮರುಪಾವತಿ ಮಾಡುತ್ತಿರುವ ಗೃಹ ಸಾಲದ ಮೇಲಿನ ಬಡ್ಡಿಯ ಮೊತ್ತವನ್ನು ಗೃಹ ಸಾಲ ಯೋಜನೆಯ ಬಡ್ಡಿ ರಿಯಾಯಿತಿ ಸಹಾಯಾನುದಾನ ಯೋಜನೆಯಡಿಯಲ್ಲಿ ಪಡೆದುಕೊಳ್ಳಬಹುದು. ಬಡ್ಡಿ ಸಹಾಯಾನುದಾನವು ಗೃಹ ಸಾಲ ಮತ್ತು ಬಡ್ಡಿಯನ್ನು ಮರುಪಾವತಿಸುತ್ತಿರುವ ಸಾಲಗಾರರಿಗೆ ಮಾತ್ರ ದೊರೆಯಲಿದೆ.

ಬಡ್ಡಿ ಸಹಾಯಾನುದಾನವನ್ನು ಕ್ರಿಶ್ಚಿಯನ್ ಸಮುದಾಯದವರ ಸಾಲ ವಸೂಲಾತಿ ಆಧಾರದಲ್ಲಿ ಆರ್ಥಿಕ ನೆರವು ನೀಡುವ ಸಂಸ್ಥೆಗಳು ಬಿಲ್ಲನ್ನು ಸಿದ್ಧಪಡಿಸಿ ಆಡಿಟರ್‌ರವರಿಂದ ದೃಢೀಕರಿಸಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸಬೇಕು.

ಅರ್ಹತೆಗಳು:

1. ಫಲಾನುಭವಿಯು ಕ್ರಿಶ್ಚಿಯನ್ ಸಮುದಾಯದವರಾಗಿದ್ದು ಕನಿಷ್ಠ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ನಿವೇಶನ ಹೊಂದಿದ್ದು ವಸತಿ ರಹಿತರಾಗಿರಬೇಕು.
3. ಫಲಾನುಭವಿಯ ಆದಾಯದ ಮಿತಿ ರೂ.1,50,000 ಒಳಗಿರಬೇಕು.
4. ಗೃಹ ಸಾಲದ ಮೊತ್ತ ಗರಿಷ್ಠ ರೂ.5.00 ಲಕ್ಷದ ಮಿತಿ ಒಳಗಿರಬೇಕು.
5. ಫಲಾನುಭವಿಯು ಕಾಲ ಕಾಲಕ್ಕೆ ನಿಗಮವು ನಿರ್ಧರಿಸುವ ನಿಯಮಗಳನ್ನು ಅನುಸರಿಸಬೇಕು.

ಅನುಷ್ಠಾನಾಧಿಕಾರ:

ಜಿಲ್ಲಾ ಸಮಿತಿಯು ಫಲಾನುಭವಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ನು ಮಂಜೂರಾತಿ ಮಾಡುವ ಅಧಿಕಾರ ಹೊಂದಿರುತ್ತದೆ. ಅನುಮೋದನೆ ಪಡೆದಿರುವ ಪ್ರಸ್ತಾವನೆಗಳಿಗೆ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರು ಅನುಮೋದನೆ ಹಾಗೂ ಮಂಜೂರಾತಿ ನೀಡುವ ಅಧಿಕಾರ ಹೊಂದಿರುತ್ತಾರೆ.

ಸಹಾಯಾನುದಾನದ ಮಿತಿ:

ಗೃಹ ಸಾಲದ ಮೇಲೆ ಫಲಾನುಭವಿಗೆ ಗರಿಷ್ಠ ರೂ.1.00 ಲಕ್ಷಗಳವರೆಗೆ ಬಡ್ಡಿ ಸಹಾಯಧನ ರೂಪದಲ್ಲಿ ನೀಡಲಾಗುತ್ತದೆ.

ಯೋಜನೆಯ ವಿಧಿ ವಿಧಾನ:

ಈ ಯೋಜನೆಯಡಿಯಲ್ಲಿ ವಿವಿಧ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳ ಮೂಲಕ ಕ್ರಿಶ್ಚಿಯನ್ ಸಮುದಾಯದ ಜನರು ಮನೆ ಕಟ್ಟಲು ಪಡೆಯುವ ಸಾಲದ ಗರಿಷ್ಠ ಮೊತ್ತ ರೂ. ಐದು ಲಕ್ಷಗಳವರೆಗೆ ಪಡೆದ ಸಾಲಕ್ಕೆ ಬ್ಯಾಂಕು/ಹಣಕಾಸು ಸಂಸ್ಥೆಗಳ ಮೂಲಕ ಬಂದಿರುವ ಪ್ರಸ್ತಾವನೆಗಳಿಗೆ ಸಹಾಯಾನುದಾನ ಬಡ್ಡಿ ರಿಯಾಯಿತಿ ರೂಪದಲ್ಲಿ ನೀಡಲಾಗುವುದು. ಫಲಾನುಭವಿಗಳ ಕುಟುಂಬದ ವಾರ್ಷಿಕ ವರಮಾನ ರೂ.1,50,000/-ಗಳನ್ನು ಮೀರಿರಬಾರದು.

ಸರ್ಕಾರದಿಂದ ಆಯವ್ಯಯದಲ್ಲಿ ಅಳವಡಿಸಿರುವ ಮೊತ್ತಕ್ಕೆ ಅನುಗುಣವಾಗಿ ಹಾಗೂ ಕ್ರೈಸ್ತ ಸಮುದಾಯದ ಆದಾರದ ಮೇಲೆ ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗುತ್ತಿದೆ. ಇದರನ್ವಯ ಆಯಾ ಜಿಲ್ಲಾ ವ್ಯವಸ್ಥಾಪಕರು ಅರ್ಜಿಗಳನ್ನು ಆಹ್ವಾನಿಸುವ ಜಾಹಿರಾತನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಿ ಅರ್ಜಿಗಳನ್ನು ಆಹ್ವಾನಿಸುತ್ತಾರೆ. ಬಡ್ಡಿ ಸಹಾಯಾನುದಾನವನ್ನು ಕ್ರಿಶ್ಚಿಯನ್ ಸಮುದಾಯದವರ ಸಾಲ ವಸೂಲಾತಿ ಆಧಾರದಲ್ಲಿ ಆರ್ಥಿಕ ನೆರವು ನೀಡುವ ಸಂಸ್ಥೆಗಳು ಬಿಲ್ಲನ್ನು ಸಿದ್ಧಪಡಿಸಿ ಆಡಿಟರ್‌ರವರಿಂದ ದೃಢೀಕರಿಸಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಫಲಾನುಭವಿಯ ಮೂಲಕ ಸಲ್ಲಿಸಬೇಕು.

ಫಲಾನುಭವಿಗಳಿಂದ ಸ್ವೀಕೃತವಾದ ಅರ್ಜಿಯನ್ನು ಪರಿಶೀಲಿಸಿ ಬಡ್ಡಿ ರಿಯಾಯಿತಿ ಸಹಾಯಾನುದಾನವನ್ನು ಅನುಮೋದನೆ ಮಾಡಲು ಜಿಲ್ಲಾ ಸಮಿತಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತದೆ. ಈ ಪ್ರಸ್ತಾವನೆಯನ್ನು ಕ್ರೋಢೀಕರಿಸಿ ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಮಂಡಿಸಿ ಅನುಮೊದನೆಯನ್ನು ಪಡೆದುಕೊಂಡು ಕೇಂದ್ರ ಕಛೇರಿಗೆ ಬಡ್ಡಿ ರಿಯಾಯಿತಿ ಸಹಾಯಾನುದಾನ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಕಳುಹಿಸುತ್ತಾರೆ. ಕೇಂದ್ರ ಕಛೇರಿಯಿಂದ ನೇರವಾಗಿ ಬಡ್ಡಿ ರಿಯಾಯಿತಿ ಸಹಾಯಾನುದಾನದ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗುತ್ತದೆ.

(ಅಬ್ಬಾಸ್ ಷರೀಫ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.